725 (1147) ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ತಹಶೀಲ್ದಾರ್‌ರ ಮತ್ತು ಗ್ರಾಮಲೆಕ್ಕಿಗರ ಹುದ್ದೆಗಳೆಷ್ಟು,

ಆ) ಆ ಪೈಕಿ ಖಾಲಿ ಇರುವ ತಹಶೀಲ್ದಾರ್ ಹುದ್ದೆಗಳೆಷ್ಟು ಮತ್ತು ಗ್ರಾಮಲೆಕ್ಕಿಗರ ಹುದ್ದೆಗಳೆಷ್ಟು ,

ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿದ್ದ ಕ್ರಮಗಳೇನು ,

ಈ) ಕೆ ಎ ಎಸ್ ನ ಎಷ್ಟು ಅಧಿಕಾರಿಗಳು ತಹಶೀಲ್ದಾರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಮಂಜೂರಾಗಿರುವ ಹುದ್ದೆಗಳು

ತಹಶೀಲ್ದಾರ್ 374

ಗ್ರಾಮಲೆಕ್ಕಿಗ 9213

ಆ) ಖಾಲಿ ಇರುವ ತಹಶೀಲ್ದಾರ್ ಹುದ್ದೆಗಳು 168

ಖಾಲಿ ಇರುವ ಗ್ರಾಮಲೆಕ್ಕಿಗರ ಹುದ್ದೆಗಳು 1094

ಇ) **ತಹಶೀಲ್ದಾರ್** ಕರ್ನಾಟಕ ಲೋಕಸೇವಾ ಆಯೋಗದಿಂದ ಗುಂಪು ಬಿ ತಹಶೀಲ್ದಾರರುಗಳ ಹುದ್ದೆಗಳಿಗೆ ನೇರ ನೇಮಕಾತಿಯ ಮೂಲಕ ಆಯ್ಕೆಯಾಗಿ ಬಂದಿರುವ ತಹಶೀಲ್ದಾರರುಗಳಲ್ಲಿ 158 ತಹಶೀಲ್ದಾರರುಗಳಿಗೆ ನೇಮಕಾತಿ ಆದೇಶ ನೀಡಲಾಗಿದೆ ನದರಿ ತಹಶೀಲ್ದಾರರುಗಳು ಪ್ರಸ್ತುತ ತರಬೇತಿಯಲ್ಲಿದ್ದು, ಪರಿವೀಕ್ಷಣಾ ಅವಧಿಯಲ್ಲಿರುತ್ತಾರೆ ತರಬೇತಿ ಮುಗಿದ ಕೂಡಲೇ ಹಾಗೂ ಶಿರಸ್ತೇದಾರಗಳನ್ನು ಪದೋನ್ನತಿ ನೀಡಿ ಆದಷ್ಟು ಶೀಘ್ರವಾಗಿ ಖಾಲಿ ಇರುವ ತಹಶೀಲ್ದಾರ್ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದು

ಗ್ರಾಮಲೆಕ್ಕಿಗರು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅವಕಾಶವಿಲ್ಲದಿರುವುದರಿಂದ ಅನುಕಂಪದ ಆಧಾರದ ಮೇಲೆ ಮಾತ್ರ ಹುದ್ದೆಗಳನ್ನು ತುಂಬಲಾಗುತ್ತಿದೆ

ಈ) ಕರ್ನಾಟಕ ಲೋಕಸೇವಾ ಆಯೋಗದಿಂದ ಕೆಎಎಸ್ (ಗುಂಮ–ಬಿ) ತಹಶೀಲ್ದಾರರಾಗಿ ಆಯ್ಕೆಗೊಂಡ 15 ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ (13 ತಹಶೀಲ್ದಾರರುಗಳು ಎಸ್ ಸಿ /ಎಸ್ ಟಿ (ವಿಶೇಷ ನೇಮಕಾತಿ) ನಿಯಮಗಳಡಿ ನೇರ ನೇಮಕಾತಿ ಹೊಂದಿದವರಾಗಿರುತ್ತಾರೆ ಉಳಿದ ಇಬ್ಬರು ನೇರ ನೇಮಕಾತಿ ಮೂಲಕ ಆಯ್ಕೆಗೊಂಡಿರುತ್ತಾರೆ